ಇ) ಇಲ್ಲ.

ಈ) ರಾಜ್ಯದಲ್ಲಿ ರೈತರ ತೊಂದರೆಗಳನ್ನು ನಿವಾರಿಸಲು ರಾಜ್ಯ ಸರ್ಕಾರವು ದಿನಾಂಕ 1.4.2008 ರಿಂದ ಶೇಕಡ 3ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ರೂಪಿಸಿರುತ್ತದೆ. ಕೃಷಿ ಸಾಲ ವಿತರಣೆಯಲ್ಲಿ ಶೇಕಡ 25ರಷ್ಟು ಹೊಸ ರೈತ ಸದಸ್ಯರಿಗೆ ಹಾಗೂ ಶೇಕಡ 18ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ರೈತ ಸದಸ್ಯರಿಗೆ ತಪ್ಪದೆ ಸಾಲ ನೀಡಲು ದಿನಾಂಕ 18.6.2009ರಂದು ಸುತ್ತೋಲೆ ಹೊರಡಿಸಲಾಗಿರುತ್ತದೆ.

903 ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) 'ಭಾಗ್ಯಲಕ್ಷ್ಮಿ' ಯೋಜನೆ ಎಂದಿನಿಂದ ಜಾರಿಗೆ ಬಂದಿದೆ; ಇದುವರೆಗೆ ಅನುಕೂಲ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; ಇದಕ್ಕಾಗಿ ಠೇವಣಿ ಇಟ್ಟ ಹಣ ಎಷ್ಟು;

ಆ) ಬಾಂಡಿನಲ್ಲಿರುವ ಷರತ್ತುಗಳು (conditions) ಪರೋಕ್ಷವಾಗಿ ವಿಮಾ ಕಂಪನಿಗೆ ಸಹಾಯವಾಗುತ್ತದೆಯೇ ಹೊರತು ಮಕ್ಕಳಿಗೆ ಸಹಾಯವಾಗದಿರುವುದು ಸರ್ಕಾರ ಮನಗಂಡಿದೆಯೇ;

ಇ) ಈ ರೀತಿಯ ಬಾಂಡ್‌ನ್ನು ನೀಡುವ ಬದಲು ಹಣವನ್ನು ಬ್ಯಾಂಕಿನಲ್ಲಿಡುವುದು ಫಲಾನುಭವಿಗಳಿಗೆ ಹೆಚ್ಚಿನ ಸಹಾಯವಾಗುವುದಿಲ್ಲವೇ;

ಈ) ಈ ಬಗ್ಗೆ ಸರ್ಕಾರ ಪರ್ಯಾಯ ಚಿಂತನೆ ಮಾಡುವುದೇ?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ಭಾಗ್ಯಲಕ್ಷ್ಮಿ ಯೋಜನೆಯು 1.4.06 ರಿಂದ ಜಾರಿಗೆ ಬಂದಿರುತ್ತದೆ. ಇಲ್ಲಿಯವರೆವಿಗೆ 6,65,737 ಫಲಾನುಭವಿಗಳು ಯೋಜನೆಯ ಪ್ರಯೋಜನ ಪಡೆದಿರುತ್ತಾರೆ. ಇದಕ್ಕಾಗಿ ಇಲ್ಲಿಯವರೆಗೆ ರೂ. 750.66 ಕೋಟಿಗಳನ್ನು ಠೇವಣಿ ಇಡಲಾಗಿದೆ.

ಆ) ಇದು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಸರ್ಕಾರವು ತೆಗೆದುಕೊಂಡ ನಿರ್ಣಯದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದಡಿಯಲ್ಲಿ ಟೆಂಡರ್ ಕರೆದು, ಭಾರತೀಯ ಜೀವ ವಿಮಾ ನಿಗಮವನ್ನು ಪಾಲುದಾರ ಹಣಕಾಸು ಸಂಸ್ಥೆಯಾಗಿ ಆಯ್ಕೆ ಮಾಡಿದ್ದು, ಫಲಾನುಭವಿಗಳ ಪರವಾಗಿ ಬ್ಯಾಂಕಿನಲ್ಲಿಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುವುದಿಲ್ಲ.

904 ಶ್ರೀ ಜಯಚಂದ್ರ ಟಿ.ಬಿ. (ಶಿರಾ): ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದ ಸಕ್ಕರೆ ಕಾರ್ಖಾನೆಗಳಿಂದ ಎಥನಾಲ್ ಉತ್ಪಾದನೆ ಎಷ್ಟು; ರಾಜ್ಯದಲ್ಲಿರುವ ಬೇಡಿಕೆ ಎಷ್ಟು;

ಆ) ಉತ್ಪಾದನೆ ಜಾಸ್ತಿ ಮಾಡಿದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಸಹಾಯವಾಗುವುದಿಲ್ಲವೇ;

ಇ) ಸಕ್ಕರೆ ಕಾರ್ಖಾನೆಗೆ ನಷ್ಟವನ್ನು ಕಡಿಮೆ ಮಾಡಲು ಹೆಚ್ಚಿನ ಸಹಾಯವಾಗುವುದಿಲ್ಲವೇ; ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 9 ಸಕ್ಕರೆ ಕಾರ್ಖಾನೆಗಳಲ್ಲಿ ದಿನವಹಿ 480 ಕಿ.ಲೀಟರ್ ಉತ್ಪಾದನಾ ಸಾಮರ್ಥ್ಯದ ಎಥನಾಲ್ ಘಟಕಗಳು ಇವೆ. ಅಂದರೆ 300 ದಿನಗಳ ಒಂದು ಹಂಗಾಮಿಗೆ ಒಟ್ಟು ಉತ್ಪಾದನೆ 14.40 ಕೋಟಿ ಲೀಟರ್ ಉತ್ಪಾದನೆ ಸಾಮರ್ಥ್ಯ ಇರುತ್ತದೆ. ಸದ್ಯಕ್ಕೆ 9 ಕಾರ್ಖಾನೆಗಳ ಪೈಕಿ 3 ಕಾರ್ಖಾನೆಗಳು ಮಾತ್ರ (ರೇಣುಕಾ ಶುಗರ್ಸ್‌ನ 2 ಘಟಕಗಳು ಹಾಗೂ ಶ್ಯಾಮನೂರು ಶುಗರ್ಸ್ ಒಂದು ಘಟಕ) ಎಥನಾಲ್ ಉತ್ಪಾದಿಸುತ್ತಿವೆ. ಹಾಲಿ